


ತಿಮ್ಮ: ನನಗೆ ಈ ದಿನ ಕುಡಿದು ಮನೆಗೆ ಹೋಗ್ಲಿಕ್ಕೆ ಹೆದ್ರಿಕೆ ಆಗ್ತಾ ಇದೆ.

ಗುಂಡ: ಯಾಕೋ?

ತಿಮ್ಮ: ನಿನ್ನೆ ನನ್ನ ಹೆಂಡ್ತಿ ಸೀಮೆ ಎಣ್ಣೆ ಡಬ್ಬ ತಂದಿಟ್ಟಿದ್ದಾಳೆ.

***

'ಇದೇನ್ರೀ ಕೋವಿಡ್ ಪ್ರೀತಿ ಅಂತ ಈ ಬಂಗ್ಲೆಗೆ ಹೆಸ್ರು ಇಟ್ಟಿದಾರಲ್ಲ ಯಾಕೆ ಅಂತೀರಾ?' ಬಂಗ್ಲೆಯತ್ತ ಕೈ ತೋರಿಸುತ್ತ ಗುಂಡ ತಿಮ್ಮನನ್ನು ಕೇಳಿದ. 'ಅದಾ,' ತಿಮ್ಮ ನುಡಿದ 'ಈ ಬಂಗ್ಲೆ ಯಜಮಾನಿ ಕೋವಿಡ್ ಸೋಂಕಿನಿಂದ ದವಾಖಾನೆ ಸೇರಿದ್ಲು. ಅಲ್ಲಿ ಕಾಳಜಿಯಿಂದ ನೋಡಿಕೊಂಡ್ರು ಅಂತ ಅಲ್ಲಿ ವೈದ್ಯರನ್ನೇ ಲವ್ ಮಾಡಿ ಮದುವೆಯಾಗಿ ಬಂಗ್ಲೆಗೆ ಈ ಬೋರ್ಡ್ ಹಾಕಿದಾಳೆ'.

***

ಗುಂಡ ಹೆಂಡ್ತಿಯನ್ನು ತರಾಟೆಗೆ ತೆಗೆದುಕೊಂಡ. 'ಲೇ, ನನ್ನದು, ನನ್ನದು ಅಂತ ಯಾಕೆ ಅಂತೀಯ. ನಮ್ಮಿಬ್ಬರದು, ನಮ್ಮಿಬ್ಬರದು ಅಂತ ಅನ್ನು ಅಂದ.' ಸರಿ ಅಂದ್ಲು ಪಾರಿ. ಮರುದಿನ ಏನೋ ಹುಡುಕ್ತಾ ಇದ್ಲು ಪಾರಿ. ಗುಂಡ 'ಏನ್ ಹುಡುಕ್ತಾ ಇದೀಯಾ ಅಷ್ಟೊತ್ತಿಂದ?' ಅಂತ ಕೇಳ್ದ. 'ಅದು ನಮ್ಮಿಬ್ಬರ ಸೀರಿ ಹುಡುಕ್ತಿದೀನಿ' ಅಂದ್ಲು.

***

ತಿಮ್ಮ: ನಾನು ಯಾವುದೇ ಕೆಲಸ ಮಾಡಿದ್ರೂ ನನ್ನ ಹೆಂಡತಿ ಹೆಲ್ಪ ಮಾಡ್ತಾಳೆ.

ಗುಂಡ: ಅದ್ಹೇಗೆ?

ತಿಮ್ಮ: ನಾನು ಕಿರಾಣಿ ಅಂಗಡಿಗೆ ಹೋದೆ ಅಂತಿಟ್ಕೋ. ಅವಳೂ ಬರ್ತಾಳೆ.

ಗುಂಡ: ಅಬ್ಬಾ! ಅವಳೇ ಸಾಮಾನು ಹೊತ್ತು ಕೊಂಡು ಬರ್ತಾಳೋ? ಎಂಥ ಜೋಡಿ ನಿಮ್ದು!

ತಿಮ್ಮ: ಹಾಗೇನಿಲ್ಲ. ಎಲ್ಲ ಸಾಮಾನು ನನ್ನ ಡುಬ್ಬದ ಮೇಲೆ ಹೊರಿಸ್ತಾಳೆ.

***

ಆತ ತನ್ನ ಗೆಳೆಯನಿಗೆ 'ಅಯ್ಯೋ, ನಿನ್ನೆ ನಾನು ನಲವತ್ತು ಅಡಿ ಉದ್ದದ ಏಣಿಯಿಂದ ಕೆಳಗೆ ಬಿದ್ದೆ.

'ನಿನಗೇನೂ ಆಗಲಿಲ್ಲವಾ?' ಗೆಳೆಯ ಕೇಳಿದ.

ಏನಾಗುತ್ತೆ? ನಾನು ಏಣಿಯ ಎರಡನೇ ಮೆಟ್ಟಿಲಿನ ಮೇಲೆ ನಿಂತಿದ್ದೆ.

***

ತಿಮ್ಮಿ: ರೀ, ನಾನು ನಾಳೆ ತವರಿಗೆ ಹೋಗ್ತೀನ್ರಿ.

ತಿಮ್ಮ: ಯಾಕೇ, ಏನಾಯ್ತು?

ತಿಮ್ಮಿ: ನಿಮ್ಮ ಅಡುಗೆ ತಿಂದು ಬಾಯಿ ಕೆಟ್ಟಿದೆ!

***

ತಿಮ್ಮ: ಯಜಮಾನ್ರೆ, ನಾನು ಕೆಲಸಾನ ಬಿಟ್ಟು ಹೋಗ್ತಾ ಇದೀನಿ.

ಗುಂಡ: ಯಾಕೋ, ಏನಾಯ್ತು?

ತಿಮ್ಮ: ನಿಮಗೆ ನನ್ನ ಮೇಲೆ ನಂಬಿಕೇನೇ ಇಲ್ಲ.

ಗುಂಡ: ನಂಬಿಕೆ ಇಲ್ಲಾಂದ್ರೆ ಬೀಗದ ಕೈಗಳನ್ನು ಟೇಬಲ್ ಮೇಲೆ ಇಡ್ತೀನಾ?

ತಿಮ್ಮ: ಅದು ಸರಿ. ಆದ್ರೆ ಆ ಬೀಗದ ಕೈಗಳಿಂದ ಯಾವ ಅಲ್ಮೆರಾನ್ನೂ ತಗಿಯಾಕ್ಕಾಗಲ್ವಲ್ಲ!

***

ತಿಮ್ಮಿ: ಏನ್ರೀ, ಈ ಫೋಟೋದಲ್ಲಿರೋರು ಯಾರು? ಮೂತಿ ನೋಡ್ರೀ ಹೇಂಗಿದೆ?

ತಿಮ್ಮ : ಏನಾಗಿದೆ?

ತಿಮ್ಮಿ : ಕೋತಿ ಹಂಗಿದೆ.

ತಿಮ್ಮ : ಅದು ನಿಂದೇ ಕಣೇ.

***

ತಿಮ್ಮ : ಲವ್ ಮಾಡೋದ್ರಲ್ಲಿ ತುಂಬ ಖುಷಿಯಿದೆ. ನೀನು ಯಾರನ್ನಾದ್ರೂ ಲವ್ ಮಾಡಿದೀಯಾ?

ಗುಂಡ: ಮಾಡೀದೀನಿ ಕಣೋ.

ತಿಮ್ಮ : ಹಾಗಿದ್ರೆ ಮದುವೆಯಾಗಿ ಬಿಡು.

ಗುಂಡ: ಅದಕ್ಕೊಂದು ಸಮಸ್ಯೆ ಇದೆ ಮಾರಾಯ.

ತಿಮ್ಮ : ಏನಂತಹ ಸಮಸ್ಯೆ?

ಗುಂಡ: ಆಕೆಯ ಗಂಡ ಅಡ್ಡ ಬರ್ತಿದಾನೆ!

***

ಗುಂಡ: ತಿಮ್ಮ , ಎಷ್ಟೊಂದು ದಿನ ಆಯ್ತು ನಿನ್ನ ನೋಡಿ. ಮನೆ ಕಡೆ ಬಂದೇ ಇಲ್ಲ.

ತಿಮ್ಮ : ತುಂಬ ಬಿಜಿ ಕಣೋ.

ಗುಂಡ: ಆದ್ರೆ, ನನ್ನ ಹೆಂಡತಿ ನಿನ್ನ ದಿನಾನೂ ನೆನಪಿಸಿಕೊಳ್ತಾಳೆ.

ತಿಮ್ಮ: ಹೌದಾ? ನಾನೂ ಅವಳೂ ಕ್ಲಾಸ್ಮೆಟ್ ಕಣೋ.

ಗುಂಡ: ನನ್ನ ಮಗನ ಮುಖ ನೋಡಿದಾಗ್ಲೆಲ್ಲ ಅವಳಿಗೆ ನಿನ್ನ ನೆನಪು ಬರ್ತಿದೆಯಂತೆ ಕಣೋ.

***

ತಿಮ್ಮ: (ಮಗನಿಗೆ) ಯಾಕೋ, ಸಪ್ಪಗಿದ್ದೀಯಾ? ಇವತ್ತು ಯಾಕೆ ಶಾಲೆಯಿಂದ ಬೇಗನೆ ಮನೆಗೆ ಬಂದಿದ್ದೀಯಲ್ಲ?

ಮಗ: ನಿಮ್ಮನ್ನು ಶಾಲೆಯಿಂದ ಹೊರ ಹಾಕಿದ್ದರು ಅಂದಿದ್ದಿರಲ್ಲ, ಅದನ್ನೇ ನೆನಪು ಮಾಡಿಕೊಳ್ತಿದ್ದೆ.

ತಿಮ್ಮ: ಹೋಗಲಿ ಬಿಡು ಅದೆಲ್ಲ ಮುಗಿದು ಹೋದ ಕತೆ ಈಗ್ಯಾಕೆ?

ಮಗ: ಮುಗಿಯಲಿಲ್ಲ ಡ್ಯಾಡ್. ಇತಿಹಾಸ ಹೇಗೆ ಪುನರಾವರ್ತನೆಯಾಗುತ್ತೆ ನೋಡಿ.

ತಿಮ್ಮ : ಈಗೇನಾಯ್ತೋ?

ಮಗ: ನನ್ನನ್ನೂ ಶಾಲೆಯಿಂದ ಹೊರ ಹಾಕಿದ್ರು....

—ಪ್ರಕಾಶ ಎಸ್.ಮನ್ನಂಗಿ,
ಮೋಟೆಬೆನ್ನೂರು.

